ಕ್ರಮ ಸಂಖ್ಯೆ	ತಾಲ್ಲೂಕು	(ಲಕ್ಷ ರೂ. ಗಳಲ್ಲಿ) ೧೯೮೯-೯೦	೧೯೯೦-೯೧	೧೯೯೧-೯೨
೧.	ಮಡಿಕೇರಿ	೨೪.೫೯	೧೭.೬೮	೧೭.೬೬
೨.	ಸೋಮವಾರ ಪೇಟೆ	೩೧.೦೭	೨೭.೨೦	೧೬.೮೮
೩.	ವಿರಾಜಪೇಟೆ	೨೮.೩೩	೨೫.೦೫	೨೧.೩೯
	ಒಟ್ಟು	೮೩.೯೯	೬೯.೯೩	೫೫.೯೭

ಮಂಡ್ಯ ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆ ವಹಿಸಿದ ರಸ್ತೆಗಳು

೧೪೪೫ (೧೫೭೫) ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿರುವ ರಸ್ತೆಯ ಉದ್ದವೆಷ್ಟು?

ಆ) ಈ ರಸ್ತೆಗಳಲ್ಲಿ ಎಷ್ಟು ಕಿ. ಮೀ. ಉದ್ದದ ರಸ್ತೆಗಳನ್ನು ಈವರೆಗೆ ರಿಪೇರಿ ಮಾಡಲಾಗಿದೆ ಮತ್ತು ವೆಚ್ಚ ಮಾಡಿರುವ ಹಣವೆಷ್ಟು?

ಇ) ಜಿಲ್ಲೆಯ ಎಲ್ಲಾ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು):-

ಅ) ಮಂಡ್ಯ ಜಿಲ್ಲೆಯ ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ ೫೦ ಕಿ. ಮೀ. ಮೀರದಂತೆ ಜಿಲ್ಲಾ ಪರಿಷತ್ ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಲು ಸರ್ಕಾರದ ಆದೇಶವನ್ನು ಸಂಖ್ಯೆ ಪಿಡಬ್ಲ್ಯುಡಿ ೬೮ ಸಿಆರ್‌ಎಂ ೬೯ ದಿನಾಂಕ ೧೮-೨-೧೯೯೨ರಲ್ಲಿ ನೀಡಲಾಗಿದ್ದು, ರಸ್ತೆಗಳ ವಿವರವನ್ನು ಶೀಘ್ರದಲ್ಲಿ ತೀರ್ಮಾನಿಸಲಾಗುವುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಂತಹ ಪ್ರಸ್ತಾಪವು ಸರ್ಕಾರದ ಮುಂದೆ ಇರುವುದಿಲ್ಲ.

ಲೋಕೋಪಯೋಗಿ ಮೇಲ್ದರ್ಜೆಗೇರಿಸಿದ ರಸ್ತೆಗಳ ವಿವರ

೧೪೪೬ (೧೪೭೭) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ದಕ್ಷಿಣ ಕನ್ನಡ, ಉತ್ತರ ಕನ್ನಡ, ಮೈಸೂರು, ಕೊಡಗು, ಹಾಸನ ಈ ಜಿಲ್ಲೆಗಳಲ್ಲಿ ೧೯೮೦ರಿಂದ ಈ ತನಕ ಲೋಕೋಪಯೋಗಿ ಇಲಾಖೆಗೆ ಮೇಲ್ದರ್ಜೆಗೇರಿಸಿದ ರಸ್ತೆಗಳೆಷ್ಟು? (ಕಿ. ಮೀ. ವಾರು, ಜಿಲ್ಲಾವಾರು ವಿವರ ನೀಡುವುದು)